## ನಿವೇದನೆ

# ಗರ್ಭಕಂಠ ಕ್ಯಾನ್ಸರ್; ಮುನ್ನೆಚ್ಚರಿಕೆಯೇ ಮದ್ದು

> **ಪ್ರತಿ ಸಂಕಟದ ಅಂಚಿನಲ್ಲಿ ಭರವಸೆಯ ಬೆಳ್ಳಿಗೆರೆ ಇರುವುದು ಪ್ರಕೃತಿಯ ನಿಯಮ. ವೈರಸ್ ವಿರುದ್ಧದ ಹೋರಾಟದಲ್ಲಿ ಮುನ್ನೆಚ್ಚರಿಕೆಗಿಂತಲೂ ಮಿಗಿಲಾದ ಮದ್ದು ಮತ್ತೊಂದಿಲ್ಲ ಎಂಬ ವಾಸ್ತವವನ್ನೂ ನಾವು ಅರಿಯಬೇಕಾಗಿದೆ.**

ಆಧುನಿಕ ವೈದ್ಯಪದ್ಧತಿ, ತಂತ್ರಜ್ಞಾನ ನಾಗಾಲೋಟದಿಂದ ಸಾಗುತ್ತಿದ್ದರೂ ವಯಸ್ಸಿನ ಭೇದವಿಲ್ಲದೆ ಮಹಿಳೆಯರನ್ನು ಗರ್ಭಕಂಠ ಕ್ಯಾನ್ಸರ್ ಕಾಡುತ್ತಿದೆ. ಹ್ಯೂಮನ್ ಪ್ಯಾಪಿಲೋಮಾ ವೈರಸ್ ಸೋಂಕು (ಎಚ್‌ಪಿವಿ) ತಗಲಿ ಬರುವ ಈ ಮಹಾಮಾರಿಯ ತಡೆಗೆ ಲಸಿಕೆ ಸಂಜೀವಿನಿಯಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಕೇಂದ್ರ ಸರ್ಕಾರ ಆರೋಗ್ಯ ಇಲಾಖೆ ಸಹಯೋಗದಲ್ಲಿ ‘ಸ್ವಸ್ಥ ನಾರಿ ಮಿಷನ್ ಯೋಜನೆ’ ಅಡಿ ಲಸಿಕೆ ಅಭಿಯಾನ ನಡೆಸುತ್ತಿದೆ.

ಹೆಣ್ಣುಮಕ್ಕಳು ಈ ಲಸಿಕೆ ಹಾಕಿಸಿಕೊಳ್ಳುವುದರಿಂದ ಭವಿಷ್ಯದಲ್ಲಿ ಗರ್ಭಕಂಠದ ಕ್ಯಾನ್ಸರ್ ಬರುವ ಸಾಧ್ಯತೆಯನ್ನು ಶೇ.90ರಷ್ಟು ತಡೆಗಟ್ಟಬಹುದು ಎನ್ನಲಾಗಿದೆ. ದೇಶಾದ್ಯಂತ ಒಂದು ಕೋಟಿಗಿಂತ ಅಧಿಕ ಬಾಲಕಿಯರಿಗೆ ಲಸಿಕೆ ಹಾಕುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ. ಗರ್ಭಕಂಠ ಕ್ಯಾನ್ಸರ್ ತಡೆಗೆ 9 ರಿಂದ 14 ವರ್ಷದೊಳಗಿನವರಿಗೆ ಎರಡು ಡೋಸ್ ಎಚ್‌ಪಿವಿ ಲಸಿಕೆ ಒದಗಿಸುವ ಬಗ್ಗೆ ತಜ್ಞರ ಸಮಿತಿ ಶಿಫಾರಸು ಮಾಡಿದೆ. ಈ ಲಸಿಕೆ ವಿತರಣೆ ಬಗ್ಗೆ ರಾಜ್ಯ ಸರ್ಕಾರವು 2025–26ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದನ್ನೂ ಇಲ್ಲಿ ಸ್ಮರಿಸಬಹುದು.

ಎಚ್‌ಪಿವಿ ಲಸಿಕೆ, ಕ್ಯಾನ್ಸರ್ ಉಂಟುಮಾಡುವ ಎಚ್‌ಪಿವಿ ತಳಿಗಳನ್ನು ತಡೆಗಟ್ಟುವಲ್ಲಿ ಹೆಚ್ಚು ಪರಿಣಾಮಕಾರಿಯಾಗಿದ್ದು, ದೀರ್ಘಕಾಲೀನ ರಕ್ಷಣೆ ನೀಡುತ್ತದೆ. ಅಲ್ಲದೆ ಇದು ಹುಡುಗಿಯರಿಗೆ ಸುರಕ್ಷಿತವೂ ಆಗಿದೆ ಎಂದು ಯುನಿಸೆಫ್ ಹೇಳಿದೆ. ಸಾಮಾನ್ಯ ಮಹಿಳೆಯರಿಗೆ ಹೋಲಿಸಿದರೆ ಎಚ್‌ಐವಿ ಪೀಡಿತ ಮಹಿಳೆಯರು ಗರ್ಭಕಂಠದ ಕ್ಯಾನ್ಸರ್‌ಗೆ ತುತ್ತಾಗುವ ಸಾಧ್ಯತೆ ಆರು ಪಟ್ಟು ಹೆಚ್ಚು, ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿ ಗರ್ಭಕಂಠದ ಕ್ಯಾನ್ಸರ್ ಅನ್ನು ನಿರ್ಮೂಲನೆ ಮಾಡಲು ಎಲ್ಲರೂ ಬದ್ಧರಾಗಿರಬೇಕು ಎನ್ನುತ್ತದೆ ವಿಶ್ವ ಆರೋಗ್ಯ ಸಂಸ್ಥೆ (WHO).

ಭಾರತದಲ್ಲಿ ಗರ್ಭಕಂಠ ಕ್ಯಾನ್ಸರ್‌ಗೆ ಸುಮಾರು ಒಂದೂವರೆ ಲಕ್ಷ ಮಹಿಳೆಯರು ಒಳಗಾಗಿದ್ದಾರೆ ಎನ್ನುತ್ತದೆ ಒಂದು ಅಧ್ಯಯನ. ಆದರೆ ಈ ಸಂಖ್ಯೆ ಇನ್ನೂ ಹೆಚ್ಚಿರಬಹುದು ಎಂದೂ ತಜ್ಞರು ಊಹಿಸಿದ್ದಾರೆ. ಮುಂದುವರೆಯುತ್ತಿರುವ ಹಾಗೂ ಹಿಂದುಳಿದ ದೇಶಗಳಲ್ಲಿ ಈ ಕ್ಯಾನ್ಸರ್ ಹೆಚ್ಚು. ಭಾರತದಲ್ಲಿ ಇದನ್ನು ಮೂರನೇ ಅತಿ ಮುಖ್ಯ ಕ್ಯಾನ್ಸರ್ ಎಂದೂ ಗುರುತಿಸಲಾಗಿದೆ.

ಗರ್ಭಕಂಠದಲ್ಲಿ ರಕ್ತಸ್ರಾವವಾಗುವುದು, ಗರ್ಭಾಶಯದ ಕೊರಳಿನಲ್ಲಿ ಅತಿಯಾದ ನೋವು, ಮುಟ್ಟಿನ ದಿನಗಳಲ್ಲಿ ಅತೀ ಹೆಚ್ಚು ರಕ್ತಸ್ರಾವ ಹಾಗೂ ಮುಟ್ಟಿನ ಸಮಯ ಹೊರತು ಬೇರೆ ಸಮಯದಲ್ಲೂ ರಕ್ತಸ್ರಾವವಾಗುವುದು, ಬಿಳಿಮುಟ್ಟಿನ ಅಧಿಕ ಸ್ರಾವ, (ವೈಟ್ ಡಿಸ್ಚಾರ್ಜ್), ಲೈಂಗಿಕ ಕ್ರಿಯೆಯ ಬಳಿಕ ರಕ್ತಸ್ರಾವ, ಯೋನಿಯಲ್ಲಿ ವೈರಸ್ ಸೋಂಕು, ವಿಪರೀತ ಬಳಲಿಕೆ ಮುಂತಾದ ಲಕ್ಷಣಗಳನ್ನು ಒಳಗೊಂಡಿದೆ ಈ ಗರ್ಭಕಂಠದ ಕ್ಯಾನ್ಸರ್.

ಲಸಿಕೆ ಬಗ್ಗೆ ನಮ್ಮ ರಾಜ್ಯದ ವಿದ್ಯಮಾನ, ಅದರಲ್ಲೂ ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಸುಮಾರು ಮೂರು ಸಾವಿರ ಹೆಣ್ಣುಮಕ್ಕಳಿಗೆ ಈಗಾಗಲೇ ಎಚ್‌ಪಿವಿ ನಿರೋಧಕ ಲಸಿಕೆ ನೀಡಲಾಗಿದ್ದು, ಯಾವುದೇ ಅಡ್ಡಪರಿಣಾಮ ಉಂಟಾಗಿಲ್ಲ ಎಂಬುದನ್ನು ಆರೋಗ್ಯ ಇಲಾಖೆ ವಿಶೇಷ ಆಯುಕ್ತರು ಖಚಿತಪಡಿಸಿದ್ದು ಸಮಾಧಾನಕರ ವಿಚಾರ. ಅಂಕಿಅಂಶಗಳನ್ನು ನೋಡಿದರೆ, 2022ರಲ್ಲಿ ಸುಮಾರು 79,103 ಗರ್ಭಕಂಠ ಕ್ಯಾನ್ಸರ್ ಪ್ರಕರಣಗಳು ವರದಿಯಾಗಿದ್ದು, 34,805 ಮಹಿಳೆಯರು ಮೃತಪಟ್ಟಿರುವುದು ಆತಂಕಕ್ಕೆ ಎಡೆಮಾಡಿಕೊಡುವಂಥದ್ದೇ. ಪ್ರತಿ ಒಂದು ಲಕ್ಷ ಮಹಿಳೆಯರಲ್ಲಿ ಸುಮಾರು 14 ಹೆಣ್ಣು ಮಕ್ಕಳು ಈ ಕ್ಯಾನ್ಸರ್‌ಗೆ ಬಲಿಯಾಗುತ್ತಿದ್ದಾರೆ ಎಂಬ ಲೆಕ್ಕಾಚಾರವೇ ಎದೆನಡುಗಿಸುತ್ತದೆ.

‘ಗರ್ಭಕಂಠದ ಕ್ಯಾನ್ಸರ್ ಅನ್ನು ಯೋನಿದರ್ಶಕ (ಕಾಲ್ಪಸ್ಕೊಪಿ) ಮೂಲಕ ಮೊದಲ ಹಂತದಲ್ಲಿಯೇ ಪತ್ತೆ ಹಚ್ಚಬಹುದು. ಈ ಲಸಿಕೆಯನ್ನು ಚಿಕ್ಕವಯಸ್ಸಿನ ಹುಡುಗಿಯರಿಂದ ಹಿಡಿದು 45 ವರ್ಷದ ಮಹಿಳೆಯರವರೆಗೆ ತೆಗೆದುಕೊಳ್ಳಬಹುದು. ಹದಿವಯಸ್ಸಿನಲ್ಲೇ ತೆಗೆದುಕೊಂಡರೆ ಇದರ ಆರೋಗ್ಯ ಲಾಭ ಹೆಚ್ಚು. ಹೆಣ್ಣುಮಕ್ಕಳು ಲೈಂಗಿಕಕ್ರಿಯೆ ಆರಂಭಿಸಿದ ಮೇಲೆ ತೆಗೆದುಕೊಳ್ಳುವುದಕ್ಕಿಂತ ಮದುವೆಗೆ ಮುನ್ನವೇ ತೆಗೆದುಕೊಳ್ಳುವುದು ಹೆಚ್ಚು ಫಲಪ್ರದ’ ಎಂದು ಬೆಂಗಳೂರಿನ ಖ್ಯಾತ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ, ಡಾ. ಪದ್ಮಿನಿ ಪ್ರಸಾದ್ ಅವರು ಅಭಿಯಾನದ ಆರಂಭದಲ್ಲೇ ಹೆಣ್ಣುಮಕ್ಕಳಿಗೆ ಕಿವಿಮಾತು ಹೇಳಿದ್ದಾರೆ.

ದೂರದ ಬೆಟ್ಟದಂತಿರುವ ಲಸಿಕೆಗಿಂತಲೂ ಅಂಗೈ ಬೆಣ್ಣೆಯಂತಹ ಸುರಕ್ಷಿತ ಕ್ರಮಗಳೇ ನಮ್ಮ ಜೀವವನ್ನು ಕಾಯಬಲ್ಲವು. ಪ್ರತಿ ಸಂಕಟದ ಅಂಚಿನಲ್ಲಿ ಭರವಸೆಯ ಬೆಳ್ಳಿಗೆರೆ ಇರುವುದು ಪ್ರಕೃತಿಯ ನಿಯಮ. ವೈರಸ್ ವಿರುದ್ಧದ ಹೋರಾಟದಲ್ಲಿ ಮುನ್ನೆಚ್ಚರಿಕೆಗಿಂತಲೂ ಮಿಗಿಲಾದ ಮದ್ದು ಮತ್ತೊಂದಿಲ್ಲ ಎಂಬ ವಾಸ್ತವವನ್ನೂ ನಾವು ಅರಿಯಬೇಕಾಗಿದೆ.

**■ ಉಮಾ ಅನಂತ್**



ವಿಜಯ